# IN THE COURT OF THE ADDL. SENIOR CIVIL JUDGE & JMFC., GUBBI
## **OS – 114/2020**

Witness present and duly sworn on : 05.02.2024

Cross Examination: by Counsel for Defendant No.1 and 2. :

ಸರ್ವೆ ನಂ.163, ಬ್ಲಾಕ್ ನಂ.3 ರಲ್ಲಿ 3 ಎಕರೆ ಜಮೀನು ನನ್ನ ಮಾವನಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಅದನ್ನು ಅವರು ಖರೀದಿ ಮಾಡಿದ್ದರು ಅಥವಾ ಮಂಜೂರಾಗಿದೇಯೇ ಎಂಬುದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಎಲ್ಲಿ ಇದೇ ಎಂದು ನನಗೆ ಗೊತ್ತಿಲ್ಲ. ವಾದಿ ಗೌರಮ್ಮರವರಿಗೆ ಸರ್ವೆ ನಂ.163 ರಲ್ಲಿ 2 ಎಕರೆ ಜಮೀನು ಮಂಜೂರು ಆಗಿರುತ್ತದೆ. ಸದರಿ ಆಸ್ತಿಯು ಯಾವಾಗ ಮಂಜೂರಾಯಿತು ಎಂದರೆ ದಿನಾಂಕ ಗೊತ್ತಿಲ್ಲ ಆದರೆ ಸುಮಾರು 2-3 ವರ್ಷಗಳ ಹಿಂದೆ ಮಂಜೂರು ಆಗಿರುತ್ತದೆ. 1992-93 ರಲ್ಲಿ ಮಂಜೂರು ಮಾಡಲು ಅರ್ಜಿಯನ್ನು ಸಲ್ಲಿಸಿದ್ದೇನು. ಮಂಜೂರು ಅರ್ಜಿ ಸಲ್ಲಿಸುವಾಗ ನಾವು ಯಾವುದು ದಾಖಲೆ ಕೊಟ್ಟಿರುವುದಿಲ್ಲ. ನಾವು ಆ ಸಮಯದಲ್ಲಿ ಸರ್ಕಾರಕ್ಕೆ ಚಲನ್ ತುಂಬಿದ್ದೇವು. ಸದರಿ ಚಲನ್ ನಗದು ಮೂಲಕ ತುಂಬಿದ್ದೇವು. ನನ್ನ ಮಾವನಿಗೆ 3 ಎಕರೆ ಜಮೀನು ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಸರ್ವೆ ನಂ.163, ಬ್ಲಾಕ್ ನಂ.3 ರಲ್ಲಿ 3 ಎಕರೆ ಜಮೀನು ಮಂಜೂರಾಗಿದ್ದು ಸದರಿ ಜಮೀನಿನಲ್ಲಿ ನಾವು ಅನುಭವದಲ್ಲಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.163, ಬ್ಲಾಕ್ ನಂ.3 ರಲ್ಲಿ 3 ಎಕರೆ ಜಮೀನಿನಲ್ಲಿ 1 ಮತ್ತು 2 ಪ್ರತಿವಾದಿಗಳಿಗೆ ಕೂಡಾ ಹಕ್ಕು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಜಮೀನು ಎಲ್ಲಿ ಇದೆ ಎಂದು ಗೊತ್ತಿರುವುದಿಲ್ಲ. ನನ್ನ ಮಾವ ಬದುಕಿರುವ ಸಮಯದಲ್ಲಿ ವಾದಿಗೆ ಬರಬೇಕಾದ ಭಾಗವನ್ನು ಪಡೆದಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರು ಭಾಗಾಂಶ ಕೇಳಬಾರದೆಂದು ಮತ್ತು ನಮಗೆ ಭಾಗ ಬಂದಿದ್ದರು ಸಹ ಈ ಸುಳ್ಳು ದಾವೆ

ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.  ನಾವು ಈಗಾಗಲೇ ಆಸ್ತಿಗಳಲ್ಲಿ 1 ಭಾಗ ಪಡೆದಿರುವ ಕಾರಣ ದಾವಾ ಆಸ್ತಿಗಳಲ್ಲಿ ಯಾವಾಗ ಬರಲಿಲ್ಲ ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi